Dr. B. B.HEGDE FIRST GRADE COLLEGE, KUNDAPURA

PROGRAMME REPORT : 2023 - 24

| Date | Programme | Resource Person |
|---|---|---|
| 18/04/24 | "V - Grow" Level - II Execution of Business Plans | Mr. Sunil K Shetty M.D Shresta Nutritions Pvt. Ltd, Bengaluru<br>Mrs. Sapna Suresh Women Entrepreneur Udupi |

**BRIEF REPORT:**

Dr. B. B. Hegde First Grade College department of Commerce organised "V-Grow" Business Day innovative Programme in the first phase the students presented the new business knowledge & in the second stage, they set up a shop for their own products and created a business fair.

Secretary of Coondapur Education Society Sri. Seetharama Nakathaya inaugurated the Programme. The chief guests Mr. Sunil K Shetty M.D Shresta Nutritions Pvt. Ltd Bengaluru and Mrs. Sapna Suresh, Women Entrepreneur Udupi were present. Alumni CA Rakshith Poojary was felicitated for his success in competitive examination.

Principal of College Prof. K. Umesh Shetty presided the Programme, Vice Principal Dr. Chethan Shetty welcome the gathering, Mr. Sudhir Kumar Asst Prof in commerce Propose vote of thanks & Mr. Satish Shetty Conveyed Master of ceremony

PRINCIPAL

Principal
Dr. B.B. Hegde First Grade College
Kundapura -576201

FACULTY COORDINATOR

(Sudhir Kumar)

Encl: Notice/Invitation/Agenda/Attendance/Feedback/Photos/News Paper cuttings etc.

Scanned with OKEN Scanner



Principal
Dr. B.B. Hegde First Grade College
Kundapura -5762

Scanned with OKEN Scanner

ಸುದ್ದಿಮನೆ ಪತ್ರಿಕೆ
Suddimane Patrike

# ವಿದ್ಯಾರ್ಥಿಗಳ ಪ್ರತಿಭೆಗೆ ಸಾಕ್ಷಿಯಾದ ಬಿ.ಬಿ ಹೆಗ್ಡೆ ಕಾಲೇಜು ಕುಂದಾಪುರ ವಿ-ಗ್ರೋ ಬ್ಯುಸಿನೆಸ್ ಪ್ಲಾನ್ ಕಾರ್ಯಕ್ರಮ

## " ಗೆಲುವು ಸುಲಭವಲ್ಲ – ನಿರಂತರ ಪ್ರಯತ್ನದ ಮೂಲಕ ಸೋಲನ್ನೂ ಸೋಲಿಸಬಹುದು" : ಸುನೀಲ್ ಶೆಟ್ಟಿ

• ರವಿಕುಮಾರ್ ಗಂಗೊಳ್ಳಿ

ಸುದ್ದಿಮನೆ

ಡಾಕ್ಟರ್ ಬಿ.ಬಿ ಹೆಗ್ಡೆ ಫಸ್ಟ್ ಗ್ರೇಡ್ ಕಾಲೇಜು ಕುಂದಾಪುರ ನಗರದ ಪ್ರತಿಷ್ಠಿತ ಕಾಲೇಜುಗಳಲ್ಲಿ ಒಂದು..!!

ಇಲ್ಲಿ ನಡೆದ V grow.. ಬಿಸಿನೆಸ್ ಪ್ಲಾನ್ ಕಾರ್ಯಕ್ರಮ ಎಲ್ಲರ ಗಮನ ಸೆಳೆದು ವಿದ್ಯಾರ್ಥಿಗಳ ಬಿಸಿನೆಸ್ ಮೈಂಡ್‌ಗೆ ಸವಾಲು ಎಸೆಯಿತು. ಅಂತಿಮ ಮತ್ತು ದ್ವಿತೀಯ ವರ್ಷದ ಬಿ.ಕಾಂ ವಿದ್ಯಾರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಸ್ಟಾಲ್ ಹಾಕಿ, ಅದರಲ್ಲಿ ತರಕಾರಿಯಿಂದ ಐಸ್ ಕ್ರೀಮ್, ರಿಬ್ ಮೀಟ್ ಒಟ್ಟಿಯಿಂದ ಫ್ಯಾನ್ಸಿ ಐಟಂ, ಪಾನಿಪುರಿ, ಅಕ್ಕಿ ಉಂಡೆಯಿಂದ ಕಸ್ ಪಟಿ, ಗೋಲಿ ಸೋಡಾ, ಜ್ಯೂಸ್, ಕ್ರಾಫ್ಟ್, ಇಲೆಕ್ಟ್ರಿಕ್, ಚಾಟ್...ಅಬ್ಬಬ್ಬಾ... ಒಂದಾ ಎರಡಾ..?? ವಿದ್ಯಾರ್ಥಿಗಳ ವ್ಯಾಪಾರ ಬಲು ಜೋರಾಗಿತ್ತು. ಚುರ್ ಪಟ್ಕ ಆಗಿತ್ತು. ವಿದ್ಯಾರ್ಥಿಗಳೇ ಸ್ವ ಸಿದ್ಧಪಡಿಸಿದ ಹೇರ್ ಆಯಿಲ್ ಗಮನ ಸೆಳೆಯಿತು. ಬ್ಯುಸಿನೆಸ್ ಟ್ರಿಕ್ಸ್ ಉಪಯೋಗಿಸಿ ವಿದ್ಯಾರ್ಥಿಗಳು ಲಾಭ ಪಡೆಯುವಲ್ಲಿ ತೀವ್ರ ಹೋರಾಟ ನಡೆಸಿದರು.

ತೆಂಗಿನ ಕಾಯಿ ವ್ಯಾಪಾರ ಜೋರಾಗಿತ್ತು. ಬೇಕರಿ ನಗು ತರುತಿತ್ತು. ವ್ಯಾಪಾರ ಅಷ್ಟು ಸುಲಭವಲ್ಲ ಎನ್ನುವ ಸೂಕ್ಷ್ಮ ಮನವರಿಕೆ ಮಾಡುವ ಸದುದ್ದೇಶ ಸಫಲತೆ ಕಾಣುವುದರೊಂದಿಗೆ ಇಲ್ಲಿ ಹಾಗೆ-ತಾಳ್ಮೆ ಅತೀ ಮುಖ್ಯ ಎಂಬ ಸಂದೇಶ ವಿದ್ಯಾರ್ಥಿಗಳಿಗೆ ಮುಟ್ಟಿತು.

ಮಕ್ಕಳಿಗೆ ವ್ಯವಹಾರದ ಒಳ ಹೊರ ತಿಳಿಸುವ ಉದ್ದೇಶ ಬಿಸಿನೆಸ್ ಪ್ಲಾನ್ ಕಾರ್ಯಕ್ರಮ ಎಂದರು ಬಿಬಿಹೆಗ್ಡೆ ಕಾಲೇಜ್ ಉಪನ್ಯಾಸಕಿ ವೀಣಾ ಭಟ್. ಯಾವುದೇ ವ್ಯವಹಾರ ಮಾಡುವಲ್ಲಿ ಮೊದಲು ಅದರ ಲಾಭ ನಷ್ಟ ಸಿದ್ಧತೆ ಬಗ್ಗೆ ಅರಿವು ತಿಳಿಸುವ ಪ್ರಯತ್ನ ಇಲ್ಲಿ ಮಕ್ಕಳಿಗೆ ಮೂಡಿಸಿದ್ದೇವೆ. ಸ್ವ ಉದ್ಯಮವಾದರೂ be serious ಎಂಬ ನೀತಿ ಇಲ್ಲಿದೆ ಎಂದರು. ಎಲ್ಲವೂ ಮಕ್ಕಳ ಶ್ರಮ ಇಲ್ಲಿದ್ದು ಪೈಪೋಟಿ ಇದೆ. ವಿದ್ಯಾರ್ಥಿಗಳಿಗೆ ಆತ್ಮ ವಿಶ್ವಾಸ ತುಂಬುವ ಪ್ರಯತ್ನ ಕಾಲೇಜ್ ಮಾಡಿಸಿದೆ. ಪ್ರತೀ ವರ್ಷ ಬಿಸಿನೆಸ್ ಪ್ಲಾನ್ ವಿವಿಧ ರೂಪದಲ್ಲಿ ಮೂಡಿ ಬರಲಿದೆ ಎಂದು ಸುದ್ದಿಮನೆಗೆ ಹೇಳಿದರು.

ಸ್ಟಾಲ್‌ಗಳು ವೈವಿಧ್ಯಮಯವಾಗಿತ್ತು. ವಿದ್ಯಾರ್ಥಿಗಳ ಜೋಷ್ ಸಕತ್ ಆಗಿತ್ತು. ಮುಂದಿನ ಬಿಸಿನೆಸ್ ಐಕಾನ್ ಇಲ್ಲಿಯೇ ಇದ್ದಾರೆ ಎನ್ನುವ ಒಂದು ಎಳೆ ಇಲ್ಲಿ ಕಂಡು ಬಂತು.

ಬಿ.ಬಿಹೆಗ್ಡೆ ಕಾಲೇಜ್ ಈ ಕಾರ್ಯಕ್ರಮದ ಮೂಲಕ ವಿದ್ಯಾರ್ಥಿಗಳಲ್ಲಿ ಹೊಸ ಸಂಚಲನ ಮೂಡಿಸಿದ್ದಾರೆ. ಎಲ್ಲಾ ಸ್ಟಾಲ್‌ಗಳಲ್ಲಿ ಹಾಕಿರುವ ಐಟಂಗಳನ್ನು ಮಕ್ಕಳೇ ಹಣ ಹೊಂದಿಸಿ ತಂದಿದ್ದು, ವ್ಯವಹಾರದ ಲಾಭ ನಷ್ಟ, ಹೂಡಿಕೆ, ಹಾಗೆ ಆಧರಿಸಿ ವಿಜೇತರಿಗೆ ಬಹುಮಾನ ನೀಡಲಾಗುತ್ತದೆ.

ಈ ಕಾರ್ಯಕ್ರಮ ವಿನೂತನವಾಗಿ ಮೂಡಿಬರುವುದರೊಂದಿಗೆ ಬಿಸಿನೆಸ್ ಪ್ರಿಯ ವಿದ್ಯಾರ್ಥಿಗಳಿಗೆ ಬಿಸಿನೆಸ್‌ನಲ್ಲಿ ನಾವು ಹೇಗೆ ಬೆಳೆಯಬಹುದೆಂಬ ಸಂದೇಶದೊಂದಿಗೆ ಹೊಸ ತಿರುವು ಇಲ್ಲಿ ದೊರಕಿದಂತಾಗಿದೆ. ವಿದ್ಯಾರ್ಥಿಗಳೊಂದಿಗೆ ಉಪನ್ಯಾಸಕ-ಉಪನ್ಯಾಸಕಿಯರ ಬಳಗ ಕೂಡ ಅಷ್ಟೇ ಆಸಕ್ತಿಯಿಂದ ಕಾರ್ಯಕ್ರಮದ ಯಶಸ್ಸಿಗೆ ಕಾರಣೀಭೂತರಾದರು. ಅಂತಿಮ ವರ್ಷದ ಬಿ.ಕಾಂ ವಿದ್ಯಾರ್ಥಿ ನಿಖಿಲ್ ಮಹಿಷಾಸುರ ವೇಷಧಾರಿಯಾಗಿ ಎಲ್ಲರ ಗಮನ ಸೆಳೆದರು.

ಈ ಕಾರ್ಯಕ್ರಮದಲ್ಲಿ ಕಾಲೇಜಿನ ದ್ವಿತೀಯ ಮತ್ತು ಅಂತಿಮ ವರ್ಷದ ಬಿ.ಕಾಂ ವಿದ್ಯಾರ್ಥಿಗಳು ಒಟ್ಟು 7 ವಿವಿಧ ಬಗೆಯ ಅಂಗಡಿಗಳನ್ನು ತೆರೆದು ಅದರಲ್ಲಿ ಅವರೇ ತಯಾರಿಸಿದ ಹಾಗೂ ಬೇರೆ ಕಡೆಯಿಂದ ತರಿಸಿದ ಸಾಮಗ್ರಿಗಳನ್ನು ಮಾರಾಟ ಮಾಡಿದರು. ಈ ವ್ಯಾಪಾರ ಮೇಳದಲ್ಲಿ ಬಳೆ ವ್ಯಾಪಾರ, ಹೂವಿನ ವ್ಯಾಪಾರ, ಸೀರೆ ವ್ಯಾಪಾರ ಎಲ್ಲರ ಹುಬ್ಬೇರಿಸಿತು. ಗ್ರಾಹಕರಾಗಿ ವಿದ್ಯಾರ್ಥಿಗಳ ಪೋಷಕರು, ಪಾಲಕರು ಬರುವುದರೊಂದಿಗೆ ಸಾರ್ವಜನಿಕ ವಲಯದಿಂದಲೂ ಹಲವಾರು ಮಂದಿ ಬಂದು ವ್ಯಾಪಾರ ನಡೆಸಿದರು. ಈ ಬಗ್ಗೆ ಮಾತನಾಡಿದ ಸಂಸ್ಥೆಯ ಪ್ರಾಂಶುಪಾಲರು ಮತ್ತು ಉಪನ್ಯಾಸಕರ ಬಳಗ, "ಈ ಕಾರ್ಯಕ್ರಮ ವಿದ್ಯಾರ್ಥಿಗಳಲ್ಲಿ ಹೊಸ ಅನುಭವ ತರುವುದರೊಂದಿಗೆ ತರಗತಿಯಲ್ಲಿ ನಾವು ಹೇಳುವ ಥಿಯರಿಗಿಂತ ಪ್ರಾಕ್ಟಿಕಲ್ ನಾಲೆಡ್ಜ್ ಹೆಚ್ಚಿನ ಅನುಭವ ನೀಡುತ್ತದೆ ಎಂಬ ನಿಟ್ಟಿನಲ್ಲಿ ಈ ವ್ಯಾಪಾರ ಮೇಳ ಹಮ್ಮಿಕೊಳ್ಳಲಾಯಿತು. ಇದರಿಂದ ಮಕ್ಕಳಲ್ಲಿನ ಕೌಶಲ್ಯ ಮತ್ತು ವ್ಯವಹಾರ ಜ್ಞಾನ ಇಮ್ಮಡಿಗೊಳ್ಳುತ್ತದೆ ಎಂಬ ಅಭಿಲಾಷೆ ನಮ್ಮದಾಗಿತ್ತು. ವಿದ್ಯಾರ್ಥಿಗಳ ಶ್ರಮ ನಮಗೆ ಖುಷಿ ನೀಡಿದೆ ಎಂದರು.

ವಿ-ಗ್ರೋ ಎಂದರೆ ನಾವು ಬೆಳೆಯಬೇಕು ಎಂದರ್ಥ. ಈ ಕಾರ್ಯಕ್ರಮದ ಬ್ಯಾನರ್ ಕೂಡ ಮಕ್ಕಳೇ ಮಾಡಿದ್ದು ಅದು ಹ್ಯಾಂಡ್‌ಮೇಡ್ ಆಗಿರುತ್ತದೆ. ಇದರ ಲೋಗೋ ಅರ್ಥಪೂರ್ಣವಾಗಿದ್ದು ಇದು ಬಿಗಿಯಾದ ಮುಷ್ಠಿಯ ಚಿತ್ರವಾಗಿರುತ್ತದೆ. ಪ್ರಯತ್ನಿಸಿದರೆ ಏನನ್ನೂ ಕೂಡ ಸಾಧಿಸಬಹುದೆಂಬ ಸಂದೇಶ ನೀಡುತ್ತದೆ. ಈ ಕಾರ್ಯಕ್ರಮದಲ್ಲಿ ಹಳೇ ವಿದ್ಯಾರ್ಥಿಗಳು ಕೂಡ ಪಾಲ್ಗೊಂಡಿದ್ದರು. ಕಳೆದ ಮೂರು ವರ್ಷದಿಂದ ಈ ಕಾರ್ಯಕ್ರಮ ಮಕ್ಕಳಲ್ಲಿ ಕೌಶಲ್ಯತೆ ಹೆಚ್ಚಿಸುತ್ತಿದೆ.

ಎ.18 ರಂದು ವಿದ್ಯಾಸಂಸ್ಥೆಯಲ್ಲಿ ನಡೆದ ಮೂರು ಹಂತದ ವಿ-ಗ್ರೋ ಬ್ಯುಸಿನೆಸ್ ಡೇ ಕಾರ್ಯಕ್ರಮವನ್ನು ಕುಂದಾಪುರ ಎಜುಕೇಶನ್ ಸೊಸೈಟಿಯ ಕಾರ್ಯದರ್ಶಿ ಸೀತಾರಾಮ ನಕ್ಕತ್ತಾಯ ಉದ್ಘಾಟಿಸಿ ಅಧ್ಯಕ್ಷತೆ ವಹಿಸಿದ್ದರು. ಉಡುಪಿ ಮಹಿಳಾ ಉದ್ಯಮಿಯಾದ ಸ್ವಪ್ನ ಸುರೇಶ್ ಮತ್ತು ಶ್ರೇಷ್ಠ ನ್ಯೂಟ್ರೀಶಿಯನ್ ಪ್ರೈ. ಲಿಮಿಟೆಡ್ ಬೆಂಗಳೂರು ಇದರ ವ್ಯವಸ್ಥಾಪಕ ನಿರ್ದೇಶಕರಾದ ಸುನೀಲ್ ಕೆ.ಶೆಟ್ಟಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದು "ಗೆಲುವು ಸುಲಭವಲ್ಲ. ನಿರಂತರ ಪ್ರಯತ್ನದ ಮೂಲಕ ಸೋಲನ್ನೂ ಸೋಲಿಸಬಹುದು ಎಂದರು. ಅಂತಿಮ ಲೆಕ್ಕ ಪರಿಶೋಧಕ ಪರೀಕ್ಷೆಯಲ್ಲಿ ತೇರ್ಗಡೆಯಾದ ರಕ್ಷಿತ್ ಪೂಜಾರಿ ಇವರನ್ನು ಸನ್ಮಾನಿಸಲಾಯಿತು. ಪ್ರಾಂಶುಪಾಲರಾದ ಪ್ರೊ. ಕೆ. ಉಮೇಶ್ ಶೆಟ್ಟಿ ಶುಭಸಂಶನೆಗೈದರು. ಉಪಪ್ರಾಂಶುಪಾಲರಾದ ಡಾ.ಚೇತನ್ ಶೆಟ್ಟಿ ಕೋವಾಡಿ ಪ್ರಾಸ್ತಾವಿಕ ಮಾತನ್ನಾಡಿದರು. ವಾಣಿಜ್ಯ ಉಪನ್ಯಾಸಕರಾದ ಸುಧೀರ್ ಕುಮಾರ್ ಸ್ವಾಗತಿಸಿದರು. ವಾಣಿಜ್ಯ ವಿಭಾಗದ ಉಪನ್ಯಾಸಕಿಯರಾದ ಶ್ರೀಮತಿ ಪ್ರೀತಿ ಹೆಗ್ಡೆ ಮತ್ತು ಪೂಜಾ ಕುಂದರ್ ಅತಿಥಿಗಳನ್ನು ಪರಿಚಯಿಸಿದರು. ವಾಣಿಜ್ಯ ವಿಭಾಗದ ಮುಖ್ಯಸ್ಥೆ ಶ್ರೀಮತಿ ವೀಣಾ ವಿ.ಭಟ್ ವಂದಿಸಿದರು. ವಾಣಿಜ್ಯ ವಿಭಾಗದ ಉಪನ್ಯಾಸಕರಾದ ಸತೀಶ್ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.














Principal
Dr. B.B. Hegde First Grade College
Kundapura -576201

Scanned with OKEN Scanner